ಓಂ ಹ್ರೀಂ ಶ್ರೀಂ

# ಶ್ರೀವಾಸವಿ ಕನ್ಯಕಾದೇವಿ ಪುರಾಣ

## ಸಪ್ತಮಾಧ್ಯಾಯ

ಮಣಿಗುಪ್ತಾದಿ ವೈಶ್ಯರು ಶಿವಪಾರ್ವತಿಯರ ಕಲ್ಯಾಣಕಥೆಯನ್ನು ಕೇಳಿ ಬಹುಸಂತಸಗೊಂಡರು. ಅವರಲ್ಲಿ ಶ್ರವಣಕುತೂಹಲವು ಹೆಚ್ಚಿತು. ಆಗ ಅವರು ಸಾಲಂಕಾಯನ ಋಷಿಯನ್ನು ನೋಡಿ,"ಹೇ ! ಮುನಿಚಂದ್ರಮರೇ ! ಅದ್ಬುತವೂ ಲೋಕಪ್ರಸಿದ್ಧವೂ ಆದ ಈಶ್ವರನ ವಿವಾಹವನ್ನು ಕುರಿತು ನಿಮ್ಮಿಂದ ಕೇಳಿದೆವು. ಇನ್ನು ಕುಮಾರಸ್ವಾಮಿಯ ಜನನ ತಾರಕಾಸುರನ ಸಂಹಾರಗಳನ್ನು ಕುರಿತ ವಿಷಯವನ್ನು ಕೇಳಬೇಕೆಂಬ ವಾಂಛೆಯಿಂದ ನಾವೆಲ್ಲರೂ ಕುತೂಹಲದಿಂದಿರುವೆವು," ಎಂದು ಬಿನ್ನವಿಸಿ ಕೊಂಡರು. ಆಗ ಸಾಲಂಕಾಯನರು ಹೀಗೆ ಹೇಳ ತೊಡಗಿದರು.

"ಹೇ ವೈಶ್ಯೋತ್ತಮರೇ! ಪುರಾತನವಾದ ಪುಣ್ಯಚರಿತ್ರೆಯ ಬಗ್ಗೆ ನೀವು ಚೆನ್ನಾಗಿ ಪ್ರಶ್ನಿಸಿದಿರಿ. ನೀವು ಕೇಳಿದ ಪ್ರಕಾರ ಅತ್ಯದ್ಭುತವಾದ ಕುಮಾರಸಂಭವ ಕಥೆಯನ್ನು ಲೋಕಭಯಂಕರನಾದ ತಾರಕಾಸುರನ ಸಂಹಾರ ಚರಿತ್ರೆಯನ್ನು ಹೇಳುತ್ತಿರುವೆ.

### ಕುಮಾರಸಂಭವ: ತಾರಕಾಸುರವಧೆ:

ಈಶ್ವರನು ರಜತಾಚಲ ಕಂದರದಲ್ಲಿ ಪಾರ್ವತಿಯೊಡಗೂಡಿ ಬಹು ಸಂವತ್ಸರಗಳ ಕಾಲ ಪ್ರಣಯಕ್ರೀಡೆಯಲ್ಲಿ ಇದ್ದನು. ತಾರಕಾಸುರನ ಅತ್ಯಾಚಾರಗಳಿಗೆ ಗುರಿಯಾಗಿ ನಡುಗುತ್ತಿದ್ದ ಅವನಿಯನ್ನು ನೋಡಿ ದೇವತೆಗಳು ಗೌರೀಶ್ವರರ ಸ್ಥಿತಿಯನ್ನು ತಿಳಿಯಲು ಬಯಸಿ ಅಲ್ಲಿಗೆ ಹೋಗಿ ಅವರ ಪ್ರಣಯಕ್ಕೆ ಭಂಗವನ್ನುಂಟು ಮಾಡಿದರು. ಅದರಿಂದ ಪಾರ್ವತಿಯು ಕುಪಿತಳಾಗಿ ದೇವತೆಗಳನ್ನು ಶಪಿಸಿ ಈಶ್ವರನನ್ನು ಬಿಟ್ಟುಹೋದಳು. ಆಗ ಈಶ್ವರನು ತನ್ನ ತೇಜಸ್ಸನ್ನು ಅಗ್ನಿಯಲ್ಲಿ ಬಿಡಲು ಆ ಅಗ್ನಿಹೋತ್ರನು ಆ ತೇಜಸ್ಸನ್ನು ಭರಿಸಲಾರದೆ ಗಂಗೆಯಲ್ಲಿ ಬಿಟ್ಟುಬಿಟ್ಟನು. ಅದೇ ಸಮಯಕ್ಕೆ ಆರುಮಂದಿ ಕೃತ್ತಿಕಾಕನ್ಯೆಯರು ಅಲ್ಲಿ ಸ್ನಾನಕ್ಕೆ ಬಂದರು. ಗಂಗೆಯಲ್ಲಿದ್ದ ಶವತೇಜಸ್ಸಿನ

ಪ್ರಭಾವದಿಂದ ಅವರು ಆರು ಮಂದಿ ಪುತ್ರರಿಗೆ ಜನ್ಮನೀಡಿದರು. ಆ ಷಟ್‌ಕೃತ್ತಿಕೆಯರು ಆ ಶಿಶುಗಳನ್ನು ಒಟ್ಟಿಗೆ ಸೇರಿಸಲು ಷಣ್ಮುಖನಾದ ಕುಮಾರಸ್ವಾಮಿಯು ರೂಪ ತಾಳಿದನು. ಆ ಕುಮಾರನನ್ನು ಅವರೇ ಸಾಕಿ ಬೆಳೆಸಿದರು.

ಯೌವ್ವನವಂತನಾದ ಬಳಿಕ ಆ ಕುಮಾರಸ್ವಾಮಿಗೆ ದೇವತೆಗಳು ತಾರಕಾಸುರನ ದುರಾಗತಗಳನ್ನೆಲ್ಲ ಕುರಿತು ನಿವೇದಿಸಿದರು. ಆಗ ಕುಮಾರಸ್ವಾಮಿಯು ಕ್ರೋಧಾರುಣ ನೇತ್ರನಾಗಿ ರುದ್ರಗಣ, ಆದಿತ್ಯಗಣ, ಮರುದ್ಗಣ, ಸಿದ್ಧಗಣ, ಗಂಧರ್ವಗಣಾದಿಗಳನ್ನು ಕರೆದುಕೊಂಡು ತಾರಕಾಸುರ ಸಂಹಾರಕ್ಕಾಗಿ ಮಾಯಾವತಿ ಪಟ್ಟಣಕ್ಕೆ ಹೊರಟನು. ಆ ಬಳಿಕ ದೇವದಾನವರ ನಡುವೆ 12 ವರ್ಷಗಳ ಕಾಲ ಘೋರವಾದ ಕದನವು ನಡೆಯಿತು. ಅಭೇದ್ಯವಾಗಿ ಭಯಂಕರ ತಾರಕಾಸುರಮಯವಾದ ಆ ಮಹಾಯುದ್ಧದಲ್ಲಿ ಕುಮಾರಸ್ವಾಮಿಯು ತನ್ನ ಶಕ್ತ್ಯಾಯುಧದಿಂದ ತಾರಕಾಸುರನನ್ನು ಸಂಹರಿಸಿದನು. ತಾರಕಾಸುರನು ಮರಣಿಸಿದ ಕೂಡಲೇ ಹತಶೇಷರಾದ ರಾಕ್ಷಸರೆಲ್ಲರೂ ಪಾತಾಳಕ್ಕೆ ಓಡಿಹೋದರು.

**ಈಶ್ವರನು ಲೋಕಕಲ್ಯಾಣಾರ್ಥವಾಗಿ ಕೈಲಾಸವಾಸಿಗಳಾದ ವೈಶ್ಯರನ್ನು ಭೂಲೋಕಕ್ಕೆ ಕಳಿಸಲು ನಿರ್ಣಯಿಸುವಿಕೆ.**

ಲೋಕಕಂಟಕನಾದ ತಾರಕಾಸುರನ ಮರಣದಿಂದ ಸಮಸ್ತ ಲೋಕಗಳಲ್ಲಿ ಆನಂದೋತ್ಸಾಹಗಳು ಹೊಮ್ಮಿ ಹರಿದವು. ಕುಮಾರಸ್ವಾಮಿಯು ಸಾಧಿಸಿದ ವಿಜಯಕ್ಕೆ ಶಿವಪಾರ್ವತಿಯರು ಅಮಿತಾನಂದ ಹೊಂದಿ ಕೈಲಾಸದಲ್ಲಿ ಅದ್ಭುತವಾದ ಆನಂದೋತ್ಸಾಹಗಳಿಂದ ವಿಜಯೋತ್ಸವನ್ನು ನಡೆಸಿಕೊಂಡರು. ಆ ಸಂದರ್ಭದಲ್ಲಿ ಗೌರೀಶ್ವರರ ಕಲ್ಯಾಣದಿನೋತ್ಸವವೂ ಕೂಡ ಎಷ್ಟೋ ವೈಭವದಿಂದ ಜರುಗಿತು. ಸಮಸ್ತ ದೇವತೆಗಳು ಆ ಮಹೋತ್ಸವದಲ್ಲಿ ಭಾಗವಹಿಸಿದರು. ದೇವತೆಗಳ ಜಯಜಯಧ್ವನಿಗಳಿಂದ ದಶದಿಕ್ಕುಗಳು ತುಂಬಿಹೋದವು. ಅನಂತರ ವಿಷ್ಣುಭಗವಾನನು ಶಿವಪಾರ್ವತಿಯರಿಗೆ ರತ್ನನಿರ್ಮಿತ ಕಿರೀಟವನ್ನು, ಎಂದಿಗೂ ಬಾಡದ ಪರಿಮಳವನ್ನು ನೀಗದ ಪದ್ಮ ಮಾಲಿಕೆ ಯನ್ನು ಬಹುಮಾನವಾಗಿತ್ತು ಅವರ ಕುಮಾರನನ್ನು ಪ್ರಶಂಸಿದನು. ಈ ವಿಧದಲ್ಲಿಯೇ

ಸಕಲಲೋಕವಾಸಿಗಳಾದ ದೇವತೆಗಳು ತವು ಆರ್ಜಿಸಿದ ವಸ್ತುಗಳಲ್ಲಿ ಅಪಾರ ಶ್ರೇಷ್ಠವಾದವುಗಳನ್ನು ಗೌರೀಶ್ವರರಿಗೂ, ಕುಮಾರಸ್ವಾಮಿಗೂ ಕಾಣಿಕೆಗಳಾಗಿ ಸಮರ್ಪಿಸಿದರು. ಆಗ ಮಹಾದೇವನು ಸಂತೋಷಿಸಿ ಸರ್ವದೇವತೆಗಳಿಂದ ಸಮಸ್ತ ಲೋಕದವರಿಂದ ಸಮರ್ಪಿಸಲ್ಪಟ್ಟ ಕಾಣಿಕೆಗಳನ್ನು ಪ್ರೀತಮನಸ್ಕನಾಗಿ ನೋಡಿದನು. ಭೂಲೋಕ ವಾಸಿಗಳಿಂದ ಮಾತ್ರ ಯಾವ ಕಾಣಿಕೆಯೂ ಬಾರದಿರುವುದನ್ನು ಗಮನಿಸಿ ಯಕ್ಷರಾಜನಾದ ಕುಬೇರನೊಡನೆ,' ಹೇ ಧನದಾ! ಎಲ್ಲ ಲೋಕದವರೂ ಚಿತ್ರವಿಚಿತ್ರವಾದ ಕಾಣಿಕೆಗಳನ್ನು ನೀಡಿದ ಈ ಸಮಯದಲ್ಲಿ ಭೂಲೋಕವಾಸಿಗಳು ಸುಗಂಧದ್ರವ್ಯಗಳನ್ನಾದರೂ ತಂದು ಸಮರ್ಪಿಸಲಿಲ್ಲವೇಕೆ ? ಅಜ್ಞಾನದಿಂದಲೇ ಅಥವಾ ಮದಾತಿಶಯದಿಂದಲೇ ಅಥವಾ ನನ್ನಲ್ಲಿ ಅನಾದರಣೆಯಿಂದಲೇ', ಎಂದು ಪ್ರಶ್ನಿಸಿದನು.

ಆಗ ಕುಬೇರನು ವಿನಯದಿಂದ ಶಿರಬಾಗಿ ಪರಮೇಶ್ವರನೊಡನೆ,' ಹೇ ದೇವಾದಿ ದೇವಾ! ತಾರಕಾಸುರನ ಆಗ್ರಹದಿಂದ ಭೂಲೋಕದಲ್ಲಿ ವರ್ಣಧರ್ಮಗಳು ಕ್ಷೀಣಿಸಿವೆ. ಅಸಹನೀಯ ಕ್ಷಾಮವು ಸಂಭವಿಸಿದೆ. ತಾರಕಾಸುರನಿಂದ ಭೀತರಾವ ರಾಜರು ಪರ್ವತ ಭೂಮಿಗಳಲ್ಲೂ, ಬ್ರಾಹ್ಮಣರು ಗೌತಮ ಮಹರ್ಷಿ ಆಶ್ರಮದಲ್ಲಿಯೂ, ವೈಶ್ಯರು ಗೋಬಿಲದಲ್ಲಿಯೂ ಅಡಗಿಕೊಂಡಿದ್ದಾರೆ. ಮರ್ತ್ಯಲೋಕದಲ್ಲಿ ಇಂಥ ವಿಷಮ ಪರಿಸ್ಥಿತಿಗಳು ನೆಲೆಸಿರುವುದರಿಂದ ಅಲ್ಲಿಂದ ಕಾಣಿಕೆಗಳು ಬಂದಿಲ್ಲ,' ಎಂದು ಬಿನ್ನವಿಸಿಕೊಂಡನು. ಆ ಸಮಯದಲ್ಲಿ ನಾರದನು ಎದ್ದು, 'ಮಹೇಶ್ವರಾ ! ಭೂಲೋಕದಲ್ಲಿಯ ತೇಜೋವಂತರಾದ ಪೂರ್ವವೈಶ್ಯರು ನಿಮ್ಮ ಅನುಗ್ರಹವನ್ನು ಸಾಧಿಸಿಕೊಂಡು ಕೈಲಾಸವಾಸಿಗಳಾಗಿ ಇಲ್ಲಿಯೇ ಆನಂದಿಸುತ್ತಿರುವರು. ಇಂಥ ಪರಿಸ್ಥಿತಿಯಲ್ಲಿ ಅವರೇ ಭೂಲೋಕದಲ್ಲಿ ಮತ್ತೆ ಸಂಪತ್ಸಮೃದ್ಧಿಗಳನ್ನು ಸಾಧಿಸಬಲ್ಲ ಸಮರ್ಥರು. ಇಲ್ಲಿರುವ ಸಿದ್ಧವೈಶ್ಯರನ್ನು ಭೂಲೋಕಕ್ಕೆ ಕಳಿಸಿದರೆ ಅವರು ಆ ಲೋಕವನ್ನು ಪುನಃ ಉದ್ಧರಿಸಬಲ್ಲರು, ಎಂದು ನುಡಿದನು. ಆ ಮಾತುಗಳನ್ನು ಕೇಳಿದ ಶಂಕರನು ಕೈಲಾಸವಾಸಿಗಳಾದ ವೈಶ್ಯರನ್ನು ಲೋಕಕಲ್ಯಾಣಾರ್ಥವಾಗಿ ಭೂಲೋಕ್ಕೆ ಕಳುಹಿಸುವುದೇ ಸಮುಚಿತವೆಂದು ಆಲೋಚಿಸತೊಡಗಿದನು.

## ವೈಶ್ಯರಚಿಂತೆ : ಅವರಿಗೆ ತ್ರಿಮೂರ್ತಿಗಳ ಅಭಯ ಪ್ರದಾನ:

ಸ್ವಲ್ಪಸಮಯ ಕಳೆಯಿತು. ಕಾಲಗತಿಯನ್ನು ತಿಳಿದ ನಾರದನು ಕೈಲಾಸವನ್ನು ಸೇರಿ ಈಶ್ವರ ಸಾನ್ನಿಧ್ಯವನ್ನು ಹೊಂದಿ ಮಹಾದೇವನೊಡನೆ, 'ತಾರಕಾಸುರನ ದೋಷಗಳಿಂದ ಭೂತಲವು ಸಾವಿರ ಸಂವತ್ಸರಗಳ ಕಾಲ ಅನಾವೃಷ್ಟಿಯಿಂದ ಜಲರಹಿತವಾಗಿ ಬಿಟ್ಟಿತು. ಶಾಕಂಬರೀ ದೇವಿಯ ಪ್ರಸಾದದಿಂದ ಶಾಕಗಳನ್ನು ಪ್ರಜೆಗಳು ಆಹಾರವಾಗಿ ಸೇವಿಸಿಕೊಂಡು ಜೀವಿಸುತ್ತಿದ್ದರು. ಸಂಕಟಕ್ಕೊಳಗಾದ ವೈಶ್ಯರು ಗೋಬಿಲದಲ್ಲಿ ಪ್ರವೇಶಿಸಿ ಇಂದಿಗೂ ಹೊರಕ್ಕೆ ಬಂದಿಲ್ಲ,' ಎಂದು ಬಿನ್ನವಿಸಿಕೊಂಡನು.

ಆಗ ಮಹೇಶ್ವರನು ವೈಶ್ಯನಾಯಕನಾದ ಸೋಮದತ್ತನನ್ನು ನೋಡಿ, 'ಪುತ್ರನೇ ! ಗೋಬಿಲದಲ್ಲಿ ಪ್ರವೇಶಿಸಿರುವ ನಿನ್ನ ವಂಶೀಯರನ್ನು ನೀನು ಉದ್ಧರಿಸು, ಅದಕ್ಕಾಗಿಯೇ ನೀವೆಲ್ಲರೂ ಲೋಕಹಿತಾರ್ಥವಾಗಿ ಭೂಲೋಕಕ್ಕೆ ಹೋಗಬೇಕಾಗಿದೆ. ಆ ಧರೆಯಲ್ಲಿ ಕವ್ಯದ್ರವ್ಯಗಳು ಪ್ರಶಸ್ತ ವಸ್ತ್ರಗಳು ಮೊದಲಾದ ವಸ್ತುಗಳನ್ನು ಅಭಿವೃದ್ಧಿಗೊಳಿಸಿ ಅವನಿಯನ್ನು ಮತ್ತೆ ಸುಸಂಪನ್ನಗೊಳಿಸಬೇಕು. ಹೀಗೆ ಭೂಮಿಯನ್ನು ಉದ್ಧರಿಸಿದ ಬಳಿಕ ಮತ್ತೆ ಶಾಶ್ವವಾದ ಪರಮಪದವನ್ನು ನೀವು ಹೊಂದಬಲ್ಲಿರಿ,' ಎಂದು ಮಧುರ ವಚನಗಳಿಂದ ನುಡಿದ ಶಿವನ ನುಡಿಗಳನ್ನು ಕೇಳಿದ ವೈಶ್ಯರು ಅತೀವ ಕಳವಳಗೊಂಡರು. ಅವರು ಈಶ್ವರನನ್ನು ನೋಡಿ,' ಹೇ ಕರುಣಾಮಯ ಮೂರ್ತಿಯೇ! ನಿನ್ನ ಪಾದಾರವಿಂದ ಮಕರಂದದಲ್ಲಿ ಆಸಕ್ತಚಿತ್ತರಾದ ನಾವು ನಿನ್ನ ಪಾದಸನ್ನಿಧಿಯನ್ನು ಅಗಲಿ ಪಾಪಮಯವಾದ ಭೂಲೋಕಕ್ಕೆ ಹೇಗೆ ಹೋಗಬಲ್ಲೆವು,? ಎಂದು ವಿಲಪಿಸಿದರು. ಆಗ ಈಶ್ವರನು ಅವರೊಡನೆ,' ಕುಮಾರರೇ! ನೀವು ದುಃಖಿಸಲು ತಕ್ಕದ್ದಲ್ಲ. ಲೋಕೋಪಕಾರಕ್ಕಾಗಿ ಭೂಲೋಕಕ್ಕೆ ಹೋಗಿರಿ. ನೀವು ಯಾವ ಪ್ರದೇಶದಲ್ಲಿ ವಾಸಿಸುತ್ತೀರೋ ಆ ದೇಶವು ರೋಗರಹಿತವಾಗಬಲ್ಲದು. ಅಲ್ಲಿ ನಿತ್ಯವೂ ಧರ್ಮವು ವೃದ್ಧಿಹೊಂದುವುದು. ಧನಧಾನ್ಯಾದಿ ಸಂಪತ್ತುಗಳು ಬೆಳೆಯುವುವು. ಆ ಲೋಕದಲ್ಲಿ ನಾನು ನಿಮಗಾಗಿ ವಿಶ್ವಕರ್ಮನಿಂದ 18 ಪಟ್ಟಣಗಳನ್ನು ನಿರ್ಮಾಣಮಾಡಿಸಿ ನಿಮ್ಮ ಮುಖ್ಯಪಟ್ಟಣದಲ್ಲಿ ಅರ್ಚಾವತಾರನಾಗಿ **ನಗರೇಶ್ವರನಾಮದಿಂದ** ಗೌರೀಸಮೇತನಾಗಿ ವಿರಾಜಿಸುತ್ತಾ ನಿಮ್ಮನ್ನು ಕಾಪಾಡುವೆನು. ನಿಮ್ಮ ಕುಲದೇವತೆಯಾದ ಯೋಗಮಾಯಾಕನ್ಯೆಯು **ವಿಂಧ್ಯವಾಸಿನಿ** ನಾಮದಿಂದ ಅರ್ಚಾವತಾರಳಾಗಿ

ನೆಲೆಸುವಳು. ಲಕ್ಷ್ಮೀ ನಾರಾಯಣರು **ಕೋನಕಮಲಾ ಜನಾರ್ದನರ** ಹೆಸರಿನಲ್ಲಿ ಅರ್ಚಾವತಾರರಾಗಿ ಅಲ್ಲಿ ಅವತರಿಸುರು. ಬ್ರಹ್ಮನೂ ಕೂಡ **ಭಾಸ್ಕರಾಚಾರ್ಯ** ನಾಮದಿಂದ ಭೃಗುವಂಶದಲ್ಲಿ ಪ್ರಭವಿಸುವನು. 'ಹೇ ವೈಶ್ಯೋತ್ತಮರೇ ! ನೀವೆಲ್ಲರು ರಮ್ಯವಾದ **ಪೆನುಗೊಂಡೆ**ಯೆಂಬ ನಗರದಲ್ಲಿ ಕಾಲಾಂತರದಲ್ಲಿ ಮತ್ತೆ ಜನ್ಮತಾಳಿ ಬಹುಕಾಲ ವಾಸಿಸಿ ಒಂದಾನೊಂದು ಕಾರಣದಿಂದ ಅಗ್ನಿಯಲ್ಲಿ ಪ್ರವೇಶಿಸಿ ಮತ್ತೆ ಪರಂಧಾಮವನ್ನು ಸೇರಬಲ್ಲಿರಿ. ಆದ್ದರಿಂದ ನನ್ನ ಆಜ್ಞೆಯನ್ನು ಅನುಸರಿಸಿ ನೀವೀಗ ಭುವಿಗೆ ತೆರಳಿರಿ, ಎಂದು ಆದೇಶಿಸಿದನು. ಸೋಮದತ್ತಾದಿ ವೈಶ್ಯರು ತಮ್ಮ ಹೃದಯಗಳಲ್ಲಿ ಹೊಮ್ಮುತ್ತಿದ್ದ ದುಃಖವನ್ನು ಅಡಗಿಸಿಕೊಂಡು ವಿನಮ್ರರಾಗಿ ಶಿವನಿಗೆ ಸಮಸ್ಕರಿಸಿ ಬೀಳ್ಕೊಂಡು ಬ್ರಹ್ಮನ ಸನ್ನಿಧಿಗೆ ಹೋದರು.

ಬ್ರಹ್ಮದೇವನು ಅವರನ್ನು ಸಮಾಧಾನಗೊಳಿಸಿ, 'ಹೇ ವೈಶ್ಯಪುಂಗವರೇ ! ಇದೆಲ್ಲವೂ ಪರಾಂಬಿಕೆಯ ಸಂಕಲ್ಪಾನುಸಾರವೇ ನಡೆಯುತ್ತಿದೆ. ನೀವು ಭೂಲೋಕಕ್ಕೆ ಹೋಗದೆ ತಪ್ಪದು ಆದರೂ ಯೋನಿಜನ್ಮವು ಬಹಳ ಅಸಹನೀಯವೆಂದು ನೀವು ಬಾಧೆಗೊಳ್ಳಬೇಡಿರಿ. ನಿಮಗೆ ನಿತ್ಯರಾಧ್ಯೆಯು ಗೋಲೋಕವಾಸಿನಿಯು ಆದ **ಕಾಮಧೇನು**ವನ್ನು ಪ್ರಾರ್ಥಿಸಿರಿ. ಕೊಂಚಕಾಲ ಗೋಗರ್ಭಪ್ರದೇಶದಲ್ಲಿ ವಾಸಿದವರಾಗಿ ನೀವು ಅನಂತರ ಗೋಕರ್ಣಕ್ಷೇತ್ರದ ದ್ವಾರಾ ಅಯೋನಿಜರಾಗಿ ಭೂಲೋಕದಲ್ಲಿ ಅವತರಿಸಬಲ್ಲಿರಿ.

ಈಗ ನೀವು ಕ್ಷೀರಸಮುದ್ರತೀರಕ್ಕೆ ಹೋಗಿ ದೇವದೇವ ನಾದ ಶ್ರೀಮಹಾವಿಷ್ಣುವನ್ನು ತಪಸ್ಸಿನಿಂದ ಆರಾಧಿಸಿರಿ,' ಎಂದು ಹೇಳಿದನು. ಆಗ ಸಿದ್ಧವೈಶ್ಯರು ಬ್ರಹ್ಮದೇವನ ವಚನಾನುಸಾರ ಶ್ರೀಮಹಾವಿಷ್ಣುವನ್ನು ಉಪಸಿದರು. ವಿಷ್ಣು ಭಗವಾನನು ಪ್ರಸನ್ನನಾಗಿ ಅವರಿಗೆ ದರ್ಶನಿಮಿತ್ತು, 'ಪುತ್ರರೇ ! ನಾನು ಗೋದಾವರಿ ನದೀ ತೀರದಲ್ಲಿ ನಿಮ್ಮ ಮುಖ್ಯಪಟ್ಟಣದಲ್ಲಿ ಜನಾರ್ದನನೆಂಬ ಹೆಸರಿನಲ್ಲಿ ಅರ್ಚಾವತಾರನಾಗಿ ನೆಲೆಸಿ ನಿಮಗೆ ಇಷ್ಟಕಾಮ್ಯಾರ್ಥ ಸಿದ್ಧಿಗಳನ್ನು ಪ್ರಸಾದಿಸುವೆ. ಲಕ್ಷ್ಮೀದೇವಿಯು ಕೋನಕಮಲ ಎಂಬ ಹೆಸರಿನಲ್ಲಿ ನನ್ನ ಜೊತೆಯಲ್ಲಿ ನೆಲೆಸುವಳು. ಸಮಸ್ತ ಭೋಗ ಭಾಗ್ಯಗಳು ತುಂಬಿ ತುಳುಕುವಂತಾಗಿ ನೀವು ಪರಾಶಕ್ತಿಯನ್ನು ಶಂಕರನನ್ನು ನನ್ನನ್ನು ಪೂಜಿಸುತ್ತ ನಿಮ್ಮ ವಂಶವು ಆ ಚಂದ್ರತಾರಾರ್ಕವಾಗಿ ಇರುವಂತೆ ನಿಲಿಸಿ.' ನೀವು

ಪರಂಧಾಮವನ್ನು ಸೇರಿ ಆನಂದಿಸುವಂತಾಗಲಿ,' ಎಂದು ವರವಿತ್ತು ಕಳಿಸಿದನು.

ಬಳಿಕ ಆ ಸಿದ್ಧವೈಶ್ಯರು ಆದಿತಿಂದಲೂ ತಮಗೆ ಆರಾಧ್ಯ ದೈವವಾದ ಯೋಗಮಾಯಾ ಕನ್ಯೆಯನ್ನು ಅತ್ಯಂತ ಭಕ್ತಿಯಿಂದ ಪ್ರಾರ್ಥಿಸಿದರು. ಆಗ ಆ ದೇವಿಯು ಕರುಣಾಂತರಂಗದಿಂದ ಅವರಿಗೆ ದರ್ಶನವಿತ್ತು, 'ಹೇ ಕುಮಾರರೇ! ನೀವು ಭೂಲೋಕಕ್ಕೆ ಹೋಗಬೇಕಾಗಿ ಬಂದುದಕ್ಕೆ ಚಿಂತಿಸುವುದು ಉಚಿತವಲ್ಲ. ಭವಿಷ್ಯದಲ್ಲಿ ನಿಮ್ಮ ನಾಯಕನಾದ ಸೋಮದತ್ತನು **ಕುಸುಮಶ್ರೇಷ್ಠಿಯೆಂಬ** ಹೆಸರಿನಲ್ಲಿ ನಿಮ್ಮ ವಂಶದಲ್ಲಿ ಮತ್ತೆ ಜನ್ಮ ತಾಳಬಲ್ಲನು. ಆಗ ನಾನು ಅವನಿಗೆ ಮಗಳಾಗಿ **ವಾಸವಿಕನ್ಯಕೆಯ** ಹೆಸರಿನಲ್ಲಿ ಭುವಿಯಲ್ಲಿ ಅವತರಿಸಿ ಧರ್ಮಪ್ರತಿಷ್ಠಾಪನೆಮಾಡಿ ನಿಮಗೆ ಮೋಕ್ಷವನ್ನು ಪ್ರಸಾದಿಸುವೆನು. ಈಗ ನೀವು ಸ್ವಲ್ಪಸಮಯ ಗೋಗರ್ಭಪ್ರದೇಶದಲ್ಲಿ ನಿವಸಿಸಿ ಬಳಿಕ ಗೋಕರ್ಣದೇಶದ ದ್ವಾರಾ ಅಯೋನಿಜರಾಗಿ ಭುವಿಯಲ್ಲಿ ಅವತರಿಸಿರಿ ಎಂದು ಹೇಳಿ ಅಂತರ್ದಾನನಾದನು.

## ವೈಶ್ಯರ ಮಹಾಪ್ರಸ್ಥಾನ

ತರುವಾಯ ಆ ವೈಶ್ಯರು ತಮ್ಮ ಚಿಂತೆಯನ್ನು ಬಿಟ್ಟು ಕೈಲಾಸದಿಂದ ಮಹಾಪ್ರಸ್ಥಾನಕ್ಕೆ ಸಿದ್ಧರಾಗಿ ಹೊರಟು ಗೋಗರ್ಭವನ್ನು ಸೇರಿದರು. ಪರಮೇಶ್ವರಿಯ ಸಂಕಲ್ಪದಿಂದ ಬ್ರಹ್ಮದೇವನು ಭೂಮಿಯ ಮೇಲೆ ಭೃಗುವಂಶದಲ್ಲಿ ನಿಜಾಂಶದಿಂದ ಭಾಸ್ಕರಾಚಾರ್ಯ ಎಂಬ ಹೆಸರಿನಲ್ಲಿ ಜನ್ಮತಾಳಿದನು. ಬಳಿಕ ಭಾಸ್ಕರಾಚಾರ್ಯರು ಸಿದ್ಧವೈಶ್ಯರ ಭೂಲೋಕಾವತರಣಕ್ಕಾಗಿ ಎದುರುನೋಡುತ್ತಾ ಗೋಕರ್ಣಪ್ರದೇಶವನ್ನು ಸೇರಿದರು. ಗೋಗರ್ಭಕ್ಷೇತ್ರದಲ್ಲಿ ಒಂದು ಸಂವತ್ಸರ ಕಾಲ ವಾಸಮಾಡಿದ ಆ ವೈಶ್ಯರು ಗೋಕರ್ಣ ಕ್ಷೇತ್ರದ ಮೂಲಕ ಹಿಮಾಲಯದ ತಪ್ಪಲಿಗೆ ಇಳಿದು ಬಂದರು. ಭಾಸ್ಕರಾಚಾರ್ಯರು ಅಲ್ಲಿ ಅವರನ್ನು ಸಂಧಿಸಿ ಅವರಿಗೆ ಪುರೋಹಿತರಾದರು. ಕೈಲಾಸದಿಂದ ಆರ್ಯಾವರ್ತಕ್ಕೆ ಅವತರಿಸಿಬಂದ ಆ ಸಿದ್ಧವೈಶ್ಯರಿಗೆ ಗುರುವಾದ ಭಾಸ್ಕರಾಚಾರ್ಯರು **"ಆರ್ಯವೈಶ್ಯ"** ರೆಂದು ಹೆಸರಿಟ್ಟರು. ಅವರು ಗಂಗಾ, ಬ್ರಹ್ಮಪುತ್ರಾ ನದಿಗಳ ಸಂಗಮ ಸ್ಥಾನವಾದ ಗೌರದೇಶವನ್ನು ಸೇರಿ ಅಲ್ಲಿ ಸ್ವಲ್ಪ ಕಾಲ ನಿವಾಸ ಮಾಡಿದರು. ಅಲ್ಲಿ ಅವರು **"ಗೌರಗೋಮತ"**ರೆಂಬ ಹೆಸರನ್ನು ಹೊಂದಿದರು. ಆ ಬಳಿಕ ಅವರು ಬೃಹತ್ ಶೈಲಗಳೆಂಬ ಪತಕೋಯಿ ಗಿರಿಪ್ರಾಂತಕ್ಕೆ ಬಂದು ಸೇರಿಕೊಂಡರು. ಅಲ್ಲಿ ತಮ್ಮ

ಕುಲದೈವವಾದ ಯೋಗಮಾಯಾ ಕನ್ಯೆಯನ್ನು **"ಕಾಮತೇಶ್ವರಿ"** ಎಂಬ ಹೆಸರಿನಲ್ಲಿ ಪ್ರತಿಷ್ಠಾಕುಸಿಕೊಂಡು **"ಕಾಮತ"** ರೆಂದು ಕರೆಯಲ್ಪಟ್ಟರು.

## ಬಾಲನಗರ ಗೌರವಬಾಲಿಲಾ ವ್ಯವಸ್ಥೆ

ಪತಕೋಯಿ ಗಿರಿಪ್ರಾಂತ್ಯವು ಗಂಧರ್ವಭುವಿಯಾದ ಮಣಿಪುರ ರಾಜ್ಯಕ್ಕೆ ಪೂರ್ವದಿಕ್ಕಿನ ಸರಿಹದ್ದಿನಲ್ಲಿದೆ. ಪೂರ್ವ ವೈರದಿಂದ ಗಂಧರ್ವರಿಗು ಮತ್ತು ವೈಶ್ಯರಿಗು ಮಧ್ಯೆ ಕಲಹಜ್ವಾಲೆಗಳೆದ್ದು ತೀವ್ರಯುದ್ಧಗಳ ರೂಪವನ್ನು ತಾಳಿದವು. ಆಗ ವೈಶ್ಯರು ತಮ್ಮ ಕುಟುಂಬದಲ್ಲಿಯ ಯುವಕರನ್ನು ಸಂಘಟಿಸಿ ಬಲಿಷ್ಠವಾದ ವಿಶಾಲ ಸೈನ್ಯಗಳನ್ನು ಏರ್ಪಡಿಸಿ ಕೊಂಡರು. ಕೆಲವು ವೈಶ್ಯಕನ್ಯೆಯರು ಗಾಯಗೊಂಡವರಿಗೂ ವೃದ್ಧರಿಗೂ ಸೇವೆಯನ್ನು ಮಾಡುತ್ತ ನಿರಂತರ ದೇವೀಪೂಜೆ, ಸಮಾಜಸೇವೆ ಮುಂತಾದ ಕಾರ್ಯಕ್ರಮಗಳಲ್ಲಿ ನಿಮಗ್ನರಾದರು. ತಮ್ಮ ದೇಶಸಮಾಜಗಳ ಸಂರಕ್ಷಣೆಗಾಗಿ ತ್ಯಾಗಮಯ ಜೀವಿಗಳಾಗಿ ಸೈನ್ಯದಲ್ಲಿ ಸೇರಿದ ವೈಶ್ಯಬಾಲಕರನ್ನು **ಬಾಲನಗರರೆಂದು** ಕರೆಯತೊಡಗಿದರು. ದೇವಿ ಸೇವೆಗೆ ಮತ್ತು ಸಮಾಜಸೇವೆಗೆ ಸೊಂಟ ಕಟ್ಟಿದ ಬಾಲಿಕೆಯರನ್ನು **ಗೌರವಬಾಲಿಕೆಯರೆಂದು** ಕರೆಯ ತೊಡಗಿದರು. ಆರ್ಯವೈಶ್ಯರ ಶುಭಕಾರ್ಯಗಳ ಸಂದರ್ಭಗಳಲ್ಲಿಯೂ, ದೇವಾಲಯಗಳಲ್ಲಿಯೂ **ಈ ಬಾಲನಗರ ಗೌರವಬಾಲಿಕೆಯರಿಗೆ ಪ್ರಥಮ ತಾಂಬೂಲ ಪ್ರಸಾದಾದಿಗಳನ್ನಿತ್ತು ಗೌರವಿಸಿದರು.** ವೈಶ್ಯರು ಬಾಲನಗರ ಸೈನ್ಯಬಲದಿಂದ ಶ್ರೀವಾಸವಿ ಕನ್ಯಕಾ ದೇವಿ ಪುರಾಣ ಅಜೇಯರಾದರು. ಆದರೆ ನಿರಂತರ ಹೋರಾಟಗಳಿಂದ ಜಿಗುಪ್ಸೆ ಹೊಂದಿ ಅಲ್ಲಿಂದ ಪ್ರಯಾಣಬೆಳೆಸಿ ಆಂಧ್ರ ಪ್ರದೇಶದ ಪಾವನ ಗೋದಾವರಿ ನದಿಯ ಪೂರ್ವದಿಕ್-ಶಾಖೆತಯದ ಗೌತಮೀ ತೀರಪ್ರದೇಶವನ್ನು ಸೇರಿದರು. ಅಲ್ಲಿ ಅವರು **ಬ್ರಹ್ಮಕುಂಡವೆಂಬ** ಜಲಾಶಯವನ್ನು ನೋಡಿದರು. ಆ ಜಲಾಶಯದಲ್ಲಿ ಒಂದೇ ನಾಳಕ್ಕೆ ಹುಟ್ಟಿದ ಮೂರು ಸಹಸ್ರದಳ ಪದ್ಮಗಳು ವಿರಾಜಿಸುತ್ತಿರುವುದನ್ನು ಕಂಡು ಆಶ್ಚರ್ಯಗೊಂಡರು. ಆಗ ಭಾಸ್ಕರಾಚಾರ್ಯರು ಆ ಜಲಾಶಯವನ್ನು ನೋಡಿ ಹೀಗೆ ನುಡಿದರು.

## ಬ್ರಹ್ಮಕುಂಡ ಮಹತ್ವ: ಅಲ್ಲಿ ವೈಶ್ಯನಗರಗಳ ನಿರ್ಮಾಣದ ನಿರ್ಣಯ:

'ಪ್ರಿಯಶಿಷ್ಯರಾವ ಓ ವೈಶ್ಯೋತ್ತಮರೇ! ನಾವು ನಮ್ಮ ಗಮ್ಯವನ್ನು ಸೇರಿಕೊಂಡೆವು. ಮನೋಜ್ಞವಾದ ಈ ಪ್ರದೇಶದಲ್ಲಿ ಪೂರ್ವದಲ್ಲಿ ಮಹಾಪುಣ್ಯಪ್ರದವಾದ ಪುಲಸ್ತ್ಯಾಶ್ರಮವು ಶೋಭಿಸುತ್ತಿತ್ತು. ಇಲ್ಲಿ ಕುಮಾರಸ್ವಾಮಿ ತಪಸ್ಸುಮಾಡಿದುದರಿಂದ ಇದು ಕುಮಾರಕ್ಷೇತ್ರವೆಂದು ಪ್ರಸಿದ್ಧವಾಯಿತು. ಅನೇಲ ಬ್ರಹ್ಮರ್ಷಿಗಳು ಇಲ್ಲಿ ಮಹಾಯಜ್ಞಗಳನ್ನು ಮಾಡಿರುವರು. ಚತುರ್ಮುಖನಾದ ಬ್ರಹ್ಮನಿಂದಲೂ ಕೂಡ ಯಜ್ಞವಾಚರಿಸಲ್ಪಟ್ಟ. ಈ ಮಹಿಮಾನ್ವಿತ ಪ್ರದೇಶದಲ್ಲಿ ಪುಲಸ್ತ್ಯ ಮಾಹಾಮುನಿಯು ಯಜ್ಞಮಾಡಲು ಬ್ರಹ್ಮ ವಿಷ್ಣುಮಹೇಶ್ವರರು ಏಕೀಕೃತರಾಗಿ ಪ್ರತ್ಯಕ್ಷವಾದರು. ಆಗ ಹೋಮಕುಂಡದ ಅಗ್ನಿಜ್ವಾಲೆಗಳು ಜಲತರಂಗಗಳಾಗಿ ಬದಲಿಸಿ. ಅದೊಂದು ಜಲಾಶಯವಾಗಿ ರೂಪತಾಳಿತು. ತ್ರಿಮೂರ್ತಿಗಳು ಏಕೀಕೃತರಾದ ಘಟನೆಗೆ ಚಿಹ್ನೆಯಾಗಿ ಈ ಜಲಾಶಯದಲ್ಲಿ ಒಂದೇ ನಾಳಕ್ಕೆ 3 ಸಹಸ್ರದಳ ಪದ್ಮಗಳು ಹುಟ್ಟಿ ಅಂದಿನಿಂದ ಶೋಭೀಸುತ್ತಿವೆ. ಅಂಥ ಈ ಬ್ರಹ್ಮಕುಂಡವನ್ನು ಯಾರು ದರ್ಶಿಸಿ ತೀರ್ಥಸೇವನೆ ಮಾಡುವರೋ ಅವರು ನಿಶ್ವಯವಾಗಿ ಬ್ರಹ್ಮನನ್ನು ಹೊಂದಬಲ್ಲರೆಂದು ಪ್ರತೀತಿ. ಈ ಬ್ರಹ್ಮಕುಂಡ ಸ್ಥಾನವೇ ನಮಗೆ ಮಿಗಿಲಾಗಿ ವಾಸಯೋಗ್ಯವಾಗಿದೆ; ಎಂದು ಆ ಕ್ಷೇತ್ರ ಮಹಾತ್ಮೆಯನ್ನು ಕುರಿತು ಹೇಳಿದರು.

ಅನಂತರ ಬ್ರಹ್ಮಾವತಾರಿಯಾದ ಭಾಸ್ಕರಾಚಾರ್ಯರು ವಿಶ್ವಕರ್ಮನನ್ನು ಕರೆಸಿ ತಮ್ಮ ಅವತಾರ ರಹಸ್ಯವನ್ನು ತಿಳಿಸಿ, ಆರ್ಯವೈಶ್ಯರ ನಿವಾಸಕ್ಕಾಗಿ ಸರ್ವಾಂಗ ಸುಂದರವಾದ ಹದಿನೆಂಟು (18) ರಾಜ್ಯಗಳನ್ನು ನಿರ್ಮಿಸಲು ಆಜ್ಞಾಪಿಸಿದನು.

ಆಗ ವಿಶ್ವಕರ್ಮನು ವಿರಿಂಚಿಯ ಆದೇಶವನ್ನು ಅನುಸರಿಸಿ (1) ಜ್ಯೇಷ್ಠ ಶೈಲ ಪೆನುಗೊಂಡೆ (2) ನಿರವದ್ಯಕ (3) ಏಲಾಪುರ (4) ವೀರ ನಾರಾಯಣ (5) ಶಿವಪುರ (6) ಆಸಂಟ (7) ನರಸಾಪುರ (8) ದನದ ಪುರ (9) ಧರ್ಮವರ (10) ಜಗನ್ನಾಥ (11) ಕಳಿಂಗ ಪಟ್ಟಣ (12) ಪಾಂಚಾಲಪುರ (13) ಪಾಲಕುಂಡ (14) ತ್ರಿಗುಣ ಪಟ್ಟಣ (15) ಭೀಮಪಟ್ಟಣ (16) ಘಂಟಸಾಲ (17) ವಿಶಾಲ (18) ಪೀಠಿಕಾಪುರ ಎಂಬ 18 ಪಟ್ಟಣಗಳನ್ನು ಈ ಭೂಮಿಯಲ್ಲಿ ನಿರ್ಮಿಸಿದನು.

ಅನೇಕ ವಿಧ ರತ್ನಗಳಿಂದ ತುಂಬಿ ಕೈಲಾಸಶಿಖರ ಸಮಾನವಾದ ಮಣಿಖಚಿತವಾದ ರಾಜಪ್ರಾಸಾದಗಳಿಂದಲೂ ಚಾತುರ್ವರ್ಣ್ಯಗಳ ಪ್ರಜೆಗಳಿಂದಲೂ ಕೂಡಿ ಶೋಭಿಸುವ ವಿಧದಲ್ಲಿ ವಿಶ್ವಕರ್ಮನು ಆ ನಗರಗಳನ್ನು ನಿರ್ಮಾಣಗೊಳಿಸಿದ ಕಾರಣದಿಂದ ಅಂದಿನಿಂದ **ವೈಶ್ಯರು ನಾಗರರೆಂದು** ಕರೆಯಲ್ಪಟ್ಟರು. ಬ್ರಹ್ಮಕುಂಡ ಸಮೀಪದಲ್ಲಿ ನಿರ್ಮಿಸಲ್ಪಟ್ಟ ಪೆನುಗೊಂಡೆ ಪಟ್ಟಣವು ವೈಶ್ಯರಿಗೆ ರಾಜಧಾನಿಯಾಯಿತು. ಪಾರ್ವತೀ ಪರಮೇಶ್ವರರು ಗೌರೀನಗರೇಶ್ವರರೆಂಬ ಹೆಸರಿನಲ್ಲಿ ಪೆನುಗೊಂಡೆ ಪುರದಲ್ಲಿ ಅರ್ಚಾವತಾರಿಗಳಾಗಿ ಅವತರಿಸಿದರು. ಲಕ್ಷ್ಮೀನಾರಾಯಣರು ಕೋನಕಮಲಕನಾರ್ದನಸ್ವಾಮಿಗಳೆಂಬ ಹೆಸರಿನಲ್ಲಿ ಆ ವೈಶ್ಯರಾಜಧಾನಿಯಲ್ಲಿ ಅರ್ಚಾವತಾರ ಮೂರ್ತಿಗಳಾಗಿ ನೆಲೆಸಿದರು. ಆದಿ ಪರಾಶಕ್ತಿಯಾದ ಯೋಗಮಾಯಾ ಕನ್ಯೆಯು ವಿಂಧ್ಯವಾಸಿನಿ ಎಂಬ ಹೆಸರಿನಲ್ಲಿ ಅರ್ಚಾವತಾರದಲ್ಲಿ ವಿರಾಜಿಸಿದಳು. ಪಶ್ಚಿಮದಲ್ಲಿ ಗೋಸ್ತ ನದೀತೀರ ಪೂರ್ವದಲ್ಲಿ ಗೋದಾವರಿ ಶಾಖೆಯಾದ ಗೌತಮೀನದಿ, ಉತ್ತರದಲ್ಲಿ ಗೋದಾವರಿಯ ಮತ್ತೊಂದು ಶಾಖೆಯಾದ ವಸಿಷ್ಠಗಂಗಾ, ದಿಕ್ಷಿಣದಲ್ಲಿ ಅಂತರ್ವೇದಿಯೆಂಬ ಸಮುದ್ರ ಹೀಗೆ ಎಲ್ಲೆಗಳಾಗಿ ಶೋಭಿಸುತ್ತಿದ್ದ ವೈಶ್ಯರಾಜಧಾನಿ ನಗರಕ್ಕೆ ಕೈಲಾಸದಲ್ಲಿಯ ವೈಶ್ಯರ ಪೂರ್ವನಿವಾಸವಾದ ಮಹಾಗಿರಿಯ ಜ್ಞಾಪಕಾರ್ಥವಾಗಿ ನಗರಿ "ಪೆನುಗೊಂಡೆ" ಯೆಂದು ಹೆಸರನ್ನಿಟ್ಟುಕೊಂಡರು. ಆ ಪೆನುಗೊಂಡೆ ನಗರವು **ಪಂಚಕ್ರೋಶ ಪಟ್ಟಣವೆಂದು** ಪ್ರಸಿದ್ಧವಾಯಿತು.

ತರುವಾಯ ಆ ವೈಶ್ಯರು ಧನೇಶ್ವರನಾದ ಕುಬೇರನಿಂದ ಮಕರಾದಿ ನವನಿಧಿಗಳನ್ನು ಹೊಂದಿದರು. ಬ್ರಹ್ಮಾಂಶ ಸ್ವರೂಪರಾದ ಭಾಸ್ಕರಾಚಾರ್ಯರೊಡಗೂಡಿ ಆ ಅಷ್ಟಾದಶ ಪಟ್ಟಣಗಳನ್ನು ಪ್ರವೇಶಿಸಿದರು. ಗುರುಭಾಸ್ಕರರು ನಗರಪ್ರವೇಶ ಸಮಯದಲಲಿ ಪುಣ್ಯಾಹ ವಾಚನಾದಿಗಳನ್ನು ಮಂಗಳಕರವಾದ ಶಾಂತಿಕ ಪೌಷ್ಟಿಕ ಯಾಜ್ಞಾದಿಗಳನ್ನು ವಿದ್ಯುಕ್ತ ರೀತಿಯಲ್ಲಿ ಮಾಡಿಸಿರು. ಪಾವನ ಗೋದಾವರಿ ನದೀಶಾಖೆಯಾದ ಗೌತಮಿೂ ಸಮಿೂಪದಲ್ಲಿ **ಬ್ರಹ್ಮಕುಂಡ ಕ್ಷೇತ್ರದ** ಬಳಿ **ಗುರುಭಾಸ್ಕರರ ಆಶ್ರಮವು** ನಿರ್ಮಿತವಾಯಿತು. ಪೆನುಗೊಂಡೆ ಪಟ್ಟಣದ ವೈಶ್ಯಸಂತತಿಯವರು ಧರ್ಮಕರ್ಮನಿರ್ವಹಣೆಯಲ್ಲಿ ಆದರ್ಶಪ್ರಾಯರಾಗಿ ಕ್ರಮವಾಗಿ 18 ಪಟ್ಟಣಗಳಲ್ಲಿ ಸೇರಿ ಸಮಸ್ತ ದಿಶೆಗಳಲ್ಲಿ ತಮ್ಮ ವ್ಯಾಪಾರವನ್ನು ಹರಡಿದರು. ದೇಶದ ನಾಲ್ಕು ದಿಕ್ಕುಗಳಲ್ಲಿಯೂ ಗತವೈಭವದಿಂದದ್ದ ಪೂರ್ವವೈಶ್ಯರಿಗೆ ತಮ್ಮ ಸಹಾಯ ಸಹಕಾರಗಳನ್ನು ನೀಡುತ್ತ ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಆಶ್ರಯವಾದರು. ಕಾಲಕ್ರಮದಲ್ಲಿ ಭಾರತಾವನಿಯಲ್ಲಿ ವಿಭಿನ್ನಪ್ರಾಂತ್ಯಗಳಲ್ಲಿ ನಿವಾಸಮಾಡಿಕೊಂಡಿದ್ದ ವೈಶ್ಯರಲ್ಲಿ ಕೆಲವರು ಆಂಧ್ರಪ್ರದೇಶದ 18 ಪಟ್ಟಣಗಳಿಗೆ ಸೇರಿ ಇಲ್ಲಿಯ ಆರ್ಯವೈಶ್ಯರೊಡನೆ ಬೆರೆತು ಹೋದರು. ಕ್ರಮವಾಗಿ ಆಂದ್ರಪ್ರದೇಶದ ವೈಶ್ಯಸಮಾಜವು 714 ಗೋತ್ರದವರಿಂದ ಪ್ರಕಾಶಿಸಿತು. ಅಂದು ಆ ವೈಶ್ಯರು ಶೈವ ವೈಷ್ಣವ ಶಾಕ್ತೇಯಾದಿ ಮತಗಳ ಮೇಲೆ ಸಮಾನವಾದ ಆದರಣೆಯನ್ನು ತೋರಿಸುತ್ತ ಮತಸಾಮರಸ್ಯದಿಂದ ವರ್ತಿಸತೊಡಗಿದರು. ಕಾಲಕ್ರಮದಲ್ಲಿ ಹೀಗೆ ಮಣಿಗುಪ್ತಾದಿಗಳಿಗೆ ಸಾಲಂಕಾಯನ ಋಷಿಯು ಹೇಳಲು ಆರ್ಯವೈಶ್ಯಶ್ರೇಷ್ಠರು ಮತ್ತು ಕೇಳಬೆಂಕೆಂಬ ಕುತೂಹಲವುಳ್ಳವರಾಗಿ, 'ವಿಪ್ರೋತ್ತಮ! ಕೈಲಾಸದಿಂದ ಗೋದಾವರಿ ತೀರದ ಭೂಮಿಗೆ ಸೇರಿ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿದ ಆ ವೈಶ್ಯವಂಶದಲ್ಲಿ ಪರಾಶಕ್ತಿಯು ಅವತರಿಸುವಳೆಂದು ಸೂತಮುನಿಯು ಶೌನಕಾದಿಗಳಿಗೆ ಹೇಳಿದರಲ್ಲವೇ? ಆಕೆ ಯಾರ ಗೃಹದಲ್ಲಿ ಜನ್ಮತಾಳಿದಳು? ಪರಾಂಬಿಕೆಯನ್ನು ಹೆತ್ತವರ ವಂಶಕ್ರಮವೆಂಥಹುದು? ಆ ವಿಷಯವನ್ನೆಲ್ಲ ನಮಗೆ ವಿವರಿಸಿ ಹೇಳಿರಿ; ಎಂದು ಪ್ರಾರ್ಥಿಸಿದರು.

## ಉದ್ವಾಹುವಿವ ವಂಶಕ್ರಮ

ಹೀಗೆ ಮಣಿಗು ಪ್ತಾದಿಗಳಿಂದ ಕೇಳಲ್ಪಟ್ಟ ಸಾಲಂಕಾಯನ ಋಷಿಯು; 'ಕುಮಾರರೇ! ಕೈಲಾಸವಾಸಿಗಳಾದ ವೈಶ್ಯರು ಗೋಕರ್ಣದಿಂದ ಭೂಮಿಗೆ ಬಂದ ಕಾಲದಲ್ಲಿ ವೈಶ್ಯಕುಲ ಭಾರವನ್ನು ವಹಿಸಿಕೊಂಡು ಅವರಿಗೆ ನಾಯಕನಾಗಿ ಪ್ರಸಿದ್ಧನಾದವನು "**ಉದ್ವಾಹು**" ಎಂಬ ಹೆಸರಿನ ವೈಶ್ಯಶ್ರೇಷ್ಠನಯ. ಅವನು ಪ್ರಾಭಾತಸ ಋಷಿಗೋತ್ರದಲ್ಲಿ ಹುಟ್ಟಿದವರಿಗೆಲ್ಲ ಮೂಲಪುರುಷನೆಂದು ಹೇಳಲ್ಪಟ್ಟನು. ಆ ಉದ್ವಾಹುವಿನ ಕುಮಾರನು "**ಮಘ**"ನು. ಅವನು ಅನೇಕವಿಧ ಯಜ್ಞಗಳಿಂದ ದೇವತೆಗಳನ್ನು ಆರಾಧಿಸಿ ಸಾರ್ಥಕನಾಮಧೇಯನಾದನು. ಅವನ ಮಗನು "**ಮಧುವಂತ**"ನು. ಅವನು ಶ್ರೀಮಹಾವಿಷ್ಣುವನ್ನು ಉಪಾಸಿಸಿ ಕಾಲಗಮನವುಳ್ಳ ವಿಮಾನವನ್ನು ಹೊಂದಿ ಯಕ್ಷಲೋಕಕ್ಕೆ ಹೋಗಿ **ವಿಶ್ವಾವಸು** ಎಂಬ ಹೆಸರಿನ ಯಕ್ಷರಾಜೇಂದ್ರನ ಕುಮಾರಿಯಾದ **ಕೋಕಿಲ** ಎಂಬ ಕುಮಾರಿಯನ್ನು ವಿವಾಹವಾಗಿ ಜಗತ್ಪ್ರಸಿದ್ಧನಾದನು. ಮಧುಮಂತನಿಗೆ **ಮಣಿಮಂತ, ಕೀರ್ತಿಮಂತ, ಶ್ವೇತ, ಮುಚಿಕುಂದ, ವಿರೋಚನ** ಎಂಬ ಬಹು ಪರಾಕ್ರಮವಂತರಾದ ಐದು ಮಂದಿ ಕುಮಾರರು ಜನಿಸಿದರು. ಅವರಲ್ಲಿ ವಿರೋಚನನಿಗೆ **ತುಲಾಧಾರ** ಮತ್ತು **ಮಣಿಧಾರ** ಎಂಬ ಈರ್ವರ್ಕುಮಾರರು ಜನಿಸಿದರು. ಅವರಲ್ಲಿ "ತುಲಾಧಾರ"ನು ಕಾಶಿಗೆ ಹೋಗಿ ಅಲ್ಲಿ ನಿವಾಸಿಸುತ್ತ ಧರ್ಮದಲ್ಲಿ **ಜಾಜಿಲಿ** ಎಂಬ ಮುನಿಸತ್ತಮನನ್ನು ಜಯಿಸಿದನೆಂದು ಹೇಳಲಾಗಿದೆ, ತುಲಾಧಾರನ ಕಥೆಯು ಅತ್ಯಂತ ಮಹತ್ವಪೂರ್ಣವಾಗಿದೆ ಎಂದು ಹೇಳಿದರು. ಆಗ ಮಣಿಗುಪ್ತಾದಿಗಳು ಸಾಲಂಕಾಯನರೊಡನೆ, 'ಗುರುವರಾ! ಜಾಜಿಲಿ ಎಂಬ ಬ್ರಾಹ್ಮಣನನ್ನು ನಿತ್ಯ ವಿಪ್ರಪ್ರೀತನಾದ ತುಲಾಧಾರನು ಯಾವ ಧರ್ಮದಿಂದ ಜಯಿಸಿದನು? ದಯೆಮಾಡಿ ಅ ವೃತ್ತಾಂತವನ್ನು ನಮಗೆ ವರ್ಣಿಸಿರಿ', ಎಂದು ಪ್ರಾರ್ಥಿಸಿದರು. ಸಾಲಂಕಾಯನರು ಈ ವಿಧವಾಗಿ ಹೇಳಲಾರಂಭಿಸಿದರು.

## ತುಲಾಧಾರನ ವೃತ್ತಾಂತ

ವೈಶ್ಯೋತ್ತಮರೇ! ಜಾಜಿಲಿಯೆಂಬ ಹೆಸರಿನ ಓರ್ವ ಬ್ರಾಹ್ಮಣೋತ್ತಮನು ಅರಣ್ಯದಲ್ಲಿ

ನಿವಾಸಮಾಡಿಕೊಂಡಿದ್ದನು. ಆತನು ತನ್ನ ತಪಸ್ಸಮಾಧಿಯಲ್ಲಿ ಸ್ವಲ್ಪವೂ ಚಲಿಸದೆ ಮರದಂತೆ ಇದ್ದುದರಿಂದ? ಕಳಿಂಗ ಪಕ್ಷಿಗಳು ಅವರ ಶಿರಸ್ಸಿನ ಮೇಲೆ ಜಟಾಕೋಟರದಲ್ಲಿ ಮೊಟ್ಟೆಗಳನ್ನಿಟ್ಟು ವಾಸಿಸುತ್ತಿದ್ದವು. ಜಾಜಿಲಿಗೆ ಆ ವಿಷಯವು ತಿಳಿದರೂ ಆ ಪಕ್ಷಿಗಳ ಸ್ವೇಚ್ಛೆಗೆ ಭಂಗವನ್ನು ಉಂಟುಮಾಡಲಿಲ್ಲ. ಆ ಮೊಟ್ಟೆಗಳು ಮರಿಗಳಾಗಿ ಹಾರುವವರೆಗು ಜಾಜಿಲಿಯ ಶಿರಸ್ಸಿನ ಮೇಲೆಯೇ ವೃದ್ಧಿಹೊಂದಿದವು. ಆದರೂ ಕೂಡ ಅ ಪಕ್ಷಿಗಳು ಮಾನಸ ಸರೋವರಕ್ಕೆ ಹೋಗದೆ ಜಾಜಿಲಿಯ ಜಟಾಕೋಟರದಲ್ಲಿಯೇ ಇರತೊಡಗಿದವು. ಆಗ ಮಹರ್ಷಿಯು ತನ್ನ ನಿಶ್ಚಲತ್ವಕ್ಕೂ ಸಹನೆಗೂ ತಾನೇ ಸಂಭ್ರಮಿಸುತ್ತ ನಾನೆಷ್ಟು ಧರ್ಮಶೀಲನಾದೆನೆಂದು ಬಲು ಅಟ್ಟಹಾಸಮಾಡಿದನು. ಆಗ ಅಂತರಿಕ್ಷದಿಂದ 'ಓ ಜಾಜಿಲಿ! ನೀನು ಧರ್ಮದಲ್ಲಿ ತುಲಾಧಾರನಿಗೆ ಸಮವಲ್ಲ. ಹೀಗೆ ಗರ್ವಿಸುವುದು ತರವಲ್ಲ' ಎಂಬ ಮಾತುಗಳು ಕೇಳಿಸಿದವು.

ಆ ಮಾತುಗಳನ್ನು ಕೇಳಿದ ಜಾಜಿಲಿ ಕ್ರೋಧವನ್ನು ಹೊಂದಿ ಅಂಗಡಿಯಲ್ಲಿ ವಸ್ತುಗಳನ್ನು ವಿಕ್ರಯ ಮಾಡುತ್ತಿದ್ದ ತುಲಾಧಾರನ ಬಳಿಗೆ ಹೋದನು. ತನ್ನ ಬಳಿಗೆ ಬರುತ್ತಿದ್ದ ಜಾಜಿಲಿಯನ್ನು ಆದರದಿಂದ ತುಲಾಧಾರನು ಎದುರ್ಗೊಂಡು ಆಹ್ವಾನಿಸಿ, 'ಹೇ ವಿಪ್ರೋತ್ತಮಾ! ನೀವು ಮಹಾನ್ ತಪಸ್ಸು ಮಾಡಿದಿರಿ. ಆದರೆ ಧರ್ಮದ ನಿಜಸ್ಥಿತಿಯನ್ನು ಮಾತ್ರ ತಿಳಿದು ಕೊಳ್ಳಲಿಲ್ಲ. ನಿಮಗೆ ನನ್ನಿಂದ ಆಗಬೇಕಾದ ಪ್ರಿಯಾವು ಯಾವುದೋ ಹೇಳಿರಿ. ನಾನು ನಿಮ್ಮ ಅಭೀಷ್ಟವನ್ನು ತಪ್ಪದೇ ನೆರವೇರಿಸಬಲ್ಲೆ' ಎಂದು ನುಡಿದನು. ಆನುಡಿಗಳನ್ನು ಕೇಳಿದ ಜಾಜಿಲಿಯು ಆಶ್ಚರ್ಯಚಕಿತನಾಗಿ, 'ಹೇ ತುಲಾಧಾರನೇ! ವ್ಯಾಪಾರಿಯಾದ ನಿನಗೆ ಇಂಥ ಬುದ್ಧಶಕ್ತಿಯು ಯಾವ ವಿಧದಲ್ಲಿ ಲಭಿಸಿತು? ನನಗೆ ತಿಳಿಸು' ಎಂದು ಕೇಳಿದನು. ಆಗ ತುಲಾಧಾರನು, 'ಹೇ ಬ್ರಾಹ್ಮಣೋತ್ತಮಾ! ಪೂರ್ವದಲ್ಲಿ ಬ್ರಹ್ಮವೇತ್ತರಿಂದ ನನಗೆ ಪುರಾತನವಾದ ಧರ್ಮಸ್ವರೂಪವು ಉಪದೇಶಿಸಲ್ಪಟ್ಟಿತು. ಭೂತದಯೆ, ಸರ್ವಪ್ರಾಣಿಗಳಲ್ಲಿ ಸ್ನೇಹಭಾವ, ದೇವತಾರಾಧನೆ, ದ್ವಿಜಾಸುರಣ್, ಸಕಲೋಚಿತ ಧರ್ಮಾಚರಣ್. ನಿರಹಂಕಾರ ಇವುಗಳೇ ಪರಮಪದ ಸೋಪಾನಗಳು, ತದಿತರವಾದವುಗಳೆಲ್ಲ ಲೋಕಾನುಸರಣೆಗಾಗಿ ಏರ್ಪಟ್ಟಿವೆ. ಅಹಂಕಾರದಿಂದ ನಿನ್ನ ತಪಸ್ಸು ನಷ್ಟವಾಗಿ ಹೋಯಿತು.


ನಾನು ಧರ್ಮದಿಂದ ಸಂಪಾದಿಸಿದ ತಪಶ್ಯಕ್ತಿಯನ್ನು ನಿನಗೆ ನೀಡುವೆನು. ಅದರಿಂದ ನೀನು ಸಮಸ್ತ ಪುಣ್ಯಲೋಕಗಳನ್ನು ಹೊಂದಬಲ್ಲೆ; ಎಂದು ಹೇಳಿ ತನ್ನ ತಪಃಶಕ್ತಿಯನ್ನು ಜಾಜಿಲಿಗೆ ಧಾರೆಯೆರೆದನು. ತುಲಾಧಾರನಿಂದ ಹೊಂದಿದ ತಪೋಬಲದಿಂದ ಜಾಜಿಲಿಯು ಪುಣ್ಯಲೋಕಗಳನ್ನು ಹೊಂದಿದನು.

ಪುತ್ರರೇ! ತ್ಯಾಗ, ದಾನಶೀಲತ್ವ ನಿಮ್ಮ ವೈಶ್ಯವರ್ಣಕ್ಕೆ ಸಾಟಿಯಿಲ್ಲದ ಮೇಟಿಗುಣಗಳೆಂಬುದು ನಿರ್ವಿವಾದ.

ಅಂಥ ತ್ಯಾಗಶೀಲನಾದ ತುಲಾಧಾರನಿಗೆ ಬ್ರಹ್ಮಜ್ಞಾನಿಯಾದ **ಮಣಿಶ್ರವನು,** ಅವನಿಗೆ ಜಟಿಲನು, ಆ ಜಟಿಲನಿಗೆ ಭದ್ರನು, ಭದ್ರನು, ಭದ್ರನಿಗೆ **ಹಯಗ್ರೀವನು** ಜನಿಸಿ ವಂಶವೃಕ್ಷವನ್ನು ಬೆಳೆಸಿದರು. ಹಯಗ್ರೀವನಿಗೆ **ಪದ್ಮಾಕ್ಷ**ನೆಂಬ ಒಬ್ಬ ಪುಣ್ಯಮೂರ್ತಿಯು ಉದಯಿಸಿದನು. ಪದ್ಮಾಕ್ಷನಿಗೆ **ಹೇಮವರ್ಣ, ಶ್ರವಣಕುಮಾರ** ಎಂಬ ಪುತ್ರರು ಜನ್ಮ ತಾಳಿದರು, ಶ್ರವಣಕುಮಾರನು ಅಂಧರಾದ ತನ್ನ ತಂದೆತಾಯಿಗಳನ್ನು ತಕ್ಕಡಿಯಲ್ಲಿ ಕುಳ್ಳಿರಿಸಿಕೊಂಡು ಹೊರುತ್ತ ಅವರಿಂದ ಸಮಸ್ತ ಪುಣ್ಯಕ್ಷೇತ್ರಗಳ ಸೇವೆ ಮಾಡಿಸಿ ಶ್ರೀರಾಮನನ್ನು ಮೀರಿಸಿದ ಪಿತೃಭಕ್ತನೆಂದು ಹೆಸರುಗಳಿಸಿದನು.

ಆ ಪದ್ಮಾಕ್ಷನ ವಂಶವು ಕಲಿಯುಗದಲ್ಲಿ ಬಹುಕಾಲದವರೆಗೂ ಮುಂದುವರೆಯಿತು. ಆ ಪವಿತ್ರ ವೈಶ್ಯವಂಶದಲ್ಲಿ **ಶಿವ**ನೆಂಬುವನು ಹುಟ್ಟಿದನು. ಅವನಿಗೆ **ಗೋಮುಖ**ನೆಂಬ ಪುತ್ರನು ಜನಿಸಿದನು. ಅವನು ಯಮಧರ್ಮನನ್ನು ಆರಾಧಿಸಿ ದೀರ್ಘಾಯುಷ್ಯವನ್ನು ಹೊಂದಿದನು. ಆ ಗೋಮುಖನ ಮಗನು **ಕುಮುದ**ನೆಂಬ ವೈಶ್ಯೋತ್ತಮನು. ಅವನ ಪುತ್ರನು **ಕಲ್ಹರ**ನೆಂಬ ಮಹಾನುಭಾವನು. ಆ ಕಲ್ಹರನು ಸಂತಾನವಿಲ್ಲದೆ ಈಶ್ವರನನ್ನು ನಿರಂತರ ಕುಸುಮಗಳಿಂದ ಪೂಜಿಸಿದನು. ಅವನ ಭಕ್ತಿಯನ್ನು ಕಂಡು ಸಂತುಷ್ಟನಾದ ಶಿವನು ಆ ಕಲ್ಹರನ ಸ್ವಪ್ನದಲ್ಲಿ ಸಾಕ್ಷಾತ್ಕರಿಸಿಕೊಂಡು ಅವನಿಗೆ ಕುಮಾರನು ಪ್ರಾಪ್ತಿಯಾಗುವಂತೆ ಒಂದು ವರವನ್ನಿತ್ತನು. ಕಲ್ಹರ ಪ್ರಭುವಿಗೆ ಸರ್ವಲಕ್ಷಣೋಪೇತನಾದ ಪುತ್ರನು ಜನ್ಮತಾಳಿದನು. ಆಗ ವಿಚಿತ್ರವಾಗಿ ಅಂತರಿಕ್ಷದಿಂದ ಕುಸುಮವರ್ಷವು ಸುರಿಯಿತು. ಕುಸುಮೇಶ್ವರನ ವರಪ್ರಸಾದರಿಂದ ಹುಟ್ಟಿದ ಆ ಕುಮಾರನಿಗೆ

ಕಲ್ಲರನು **ಕುಸುಮಶ್ರೇಷ್ಠಿ** ಯೆಂದು ನಾಮಕರಣ ಮಾಡಿದನು. 'ಹೇ ಮಣಿಗುಪ್ತಾದಿ ವೈಶ್ಯಪುಂಗವರೇ! ನಿಮಗೊಂದು ವಿಶಿಷ್ಟ ವಿಷಯವನ್ನು ಹೇಳುತ್ತಿರುವೆ. ಸಾವಧಾನದಿಂದ ಕೇಳಿರಿ ದ್ವಿಜರಿಗೆ ಪ್ರಪ್ರಥಮ ಪಿತೃದೇವತೆಗಳಾಗಿರುವವರನ್ನು ಕುರಿತು ಹರಿವಂಶಾದಿ ಪುರಾಣಗ್ರಂಥಗಳಲ್ಲಿ ವಿವರಿಸಲ್ಪಟ್ಟಿದೆ. ಆ ಪಿತೃದೇವತೆಗಳು ದೇವತೆಗಳಿಗಿಂತ ಪೂರ್ವಿಕರೆಂದು ಹೇಳಲ್ಪಟ್ಟಿದೆ. ಅಂದು ಬ್ರಹ್ಮಸಭೆಯಲ್ಲಿ ವೈಶ್ಯವಂಶ ಗೋತ್ರಾಭಿವೃದ್ಧಿಯನ್ನು ಮಾಡಿ ಬ್ರಹ್ಮನಿಗೆ ನಿವೇದಿಸಿ ಸನ್ಮಾನಿತರಾದ ವೈಶ್ಯರಿಗೆ **ಶ್ರೇಷ್ಠ**ರೆಂಬ ಬಿರುದನ್ನು ಸಮುಪಾರ್ಜಿಸಿಕೊಟ್ಟ ಸೋಮದತ್ತನೆಂಬ ವೈಶ್ಯಗಣಾಧಿಪತಿ ವೈಶ್ಯವರ್ಣಕ್ಕೆ ಪ್ರಪ್ರಥಮ ಪಿತೃದೇವತೆಯೆಂದು ಹೇಳಿಲ್ಪಟ್ಟಿರುವನು. ಅವನು ಅನಂತ ಮಹಿಮಾನ್ವಿತನಾಗಿದ್ದನು. ಆದಿಪರಾಶಕ್ತಿಗೆ ಪರಮಪ್ರೀತನಾಗಿದ್ದನು. ತದನಂತರ ಆ ಸೋಮದತ್ತನೇ ಸಮಾಧಿಯೆಂಬ ವೈಶ್ಯಕುಲೋತ್ತಮನಾಗಿ ಜನ್ಮತಳೆದು, **ಸುರಥರಾಜ**ನೊಡನೆ ಸೇರಿ ಪರಾಶಕ್ತಿಯನ್ನು ಅರ್ಚಿಸಿ ಆ ಜಗನ್ಮಾತೆಯಿಂದ ಸಬಾಂಧವ ಮೋಕ್ಷವೆಂಬ ವರವನ್ನು ಹೊಂದಿದನು. ಆನಂತರದ ಯುಗದಲ್ಲಿ ನಿಮ್ಮ ಪೂರ್ವ ವೈಶ್ಯೋತ್ತಮರು ಶಿವನ ಕೃಪೆಯಿಂದ ಕೈಲಾಸವಾಸಿಗಳಾಗಿದ್ದಾಗ ಆ ಸಮಾಧಿಯೇ ಜನ್ಮತಾಳಿ ಸೋಮದತ್ತನೆಂಬ ನಾಮಧೇಯ ಪಡೆದು ಅಂದಿನ ವೈಶ್ಯರಿಗೆ ನಾಯಕನಾಗಿ ಪರಾಂಬಿಕೆಯನ್ನು ಕೀರ್ತಿಕನ್ಯೆಯ ರೂಪದಲ್ಲಿ ಪುತ್ರಿಯಾಗಿ ಪಡೆದನು. ಕೈಲಾಸವನ್ನು ಬಿಟ್ಟುಬರುವ ಸಮಯದಲ್ಲಿ ಶಂಕರನಿಂದ ಕೂಡ ತನ್ನ ಬಂಧುಗಳಿಗೆಲ್ಲ ಅಗ್ನಿಮುಖೇನ ಮೋಕ್ಷಹೊಂದುವ ವರವನ್ನು ಪಡೆದನು. ಆ ಸೋಮದತ್ತನೇ ಈಗ ಕಲ್ಲರ ಪ್ರಭುವಿಗೆ ಕುಸುಮಶ್ರೇಷ್ಠಿ ಅಭಿದಾನದಲ್ಲಿ ಕುಮಾರನಾಗಿ ಉದಯಿಸಿದನು. ಇದು ಅತ್ಯಂತ ಗಮನಾರ್ಹವಾದ ವಿಷಯವಾಗಿದೆ. ಆ ಕುಮಾರನು ದಿನೇ ದಿನೇ ಅತ್ಯಂತ ತೇಜೋವಂತನಾಗಿ ಪ್ರವರ್ಧಮಾನ ಹೊಂದಿದನು. ಅವನಿಗೆ 8 ವರ್ಷ ವಯಸ್ಸು ಪ್ರಾಪ್ತಿಯಾದ ಕೂಡಲೇ ತಂದೆಯಾದ ಕಲ್ಲರನು ಕುಮಾರನಿಗೆ ಉಪನಯನ ಸಂಸ್ಕಾರ ಮಾಡಿಸಿ ಗುರುವಾದ ಭಾಸ್ಕರಾಚಾರ್ಯರಿಗೆ ಒಪ್ಪಿಸಿದನು.



ವೈಶ್ಯರು ಹಡಗಿನಲ್ಲಿ ವ್ಯಾಪಾರಮಾಡುವುದು.

### ಕುಸುಮಶ್ರೇಷ್ಠಿಯ ವಿವಾಹ: ರಾಜ್ಯಪಾಲನೆಯ ವಿಶಿಷ್ಟತೆ:

ಭಾಸ್ಕರಾಚಾರ್ಯರ ಶಿಕ್ಷಣದಲ್ಲಿ ಅನತಿಕಾಲದಲ್ಲೇ ಕುಸುಮಶ್ರೇಷ್ಠಿಯು ವೇದವೇದಾಂಗಗಳನ್ನೂ ಷಡ್‌ಶಾಸ್ತ್ರಗಳನ್ನೂ ರಾಜೋಚಿತವಾದ ಸಕಲ ವಿದ್ಯೆಗಳನ್ನೂ ಸಂಪೂರ್ಣವಾಗಿ ಅಭ್ಯಾಸ ಮಾಡಿದನು. ಕುಸುಮಶ್ರೇಷ್ಠಿಯು ಯೌವ್ವನವಂತನಾದ ಕೂಡಲೇ ಅವನಿಗೆ ಮಣಿಕುಂಡಲ ನೆಂಬ ಮಹಾಮುನಿಯ ಪ್ರತಿಕೆಯಾದ ಕೌಸುಂಭಿಯೊಡನೆ ಕಲ್ಯಾಣವು ನಡೆಯಿತು. ಆ ಬಳಿಕ ಕಲ್ಲಾರಪ್ರಭಿವು ಕುಸುಮಶ್ರೇಷ್ಠಿಗೆ ರಾಜ್ಯಭಾರವನ್ನು ಒಪ್ಪಿಸಿ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ವನಕ್ಕೆ ತೆರಳಿದನು. ಕುಸುಮಶ್ರೇಷ್ಠಿಯು ಹದಿನೆಂಟು ಪಟ್ಟಣಗಳ ನಾಯಕರಾದ ನಗರಸ್ವಾಮಿಗಳೊಡನೆ ಒಂದು ಮಹಾಸಮಿತಿಯನ್ನು ಏರ್ಪಡಿಸಿ ಅವರ ಅಭಿಪ್ರಾಯಗಳನ್ನು ಆಲಿಸುತ್ತಾ ಗಣತಂತ್ರ ವಿಧಾನದಲ್ಲಿ ವೈಶ್ಯಸಾಮ್ರಾಜ್ಯವನ್ನು ಪ್ರಜಾನುರಂಜಕವಾಗಿ ಪರಿಪಾಲಿಸತೊಡಗಿದನು. ಅವನು ಕೃಷಿಕರ ಪಾಲಿನ ಕಲ್ಪತರುವಾಗಿ ಬಂಗಾರದಂತಹ ಫಸಲನ್ನು ತೆಗೆಯುವಂತೆ ಮಾಡಿದನು. ಸಾವಿರಾರು ಗೋಶಾಲೆಗಳನ್ನು

ನಿರ್ಮಿಸಿ ಪಶುಸಂಪತ್ತನ್ನು ಅಭಿವೃದ್ಧಿಗೊಳಿಸಿದನು. ವಿನೂತನವಾದ ಸೌಕರ್ಯಗಳಿಂದ ಕೂಡಿದ ಘನವಾದ ಹಡಗುಗಳ ನಿರ್ಮಾಣದಿಂದ ಸಮುದ್ರವ್ಯಾಪಾರವನ್ನು ಹೆಚ್ಚಿಸಿದನು. ಕವಿ, ಶಿಲ್ಪಿ, ಪಂಡಿತ ಗಾಯಕರನ್ನು ಪ್ರೋತ್ಸಾಹಿಸಿ **ಲಲಿತಕಲಾಪೋಷಕನೆಂಬ** ರಮ್ಯಕೀರ್ತಿಯನ್ನು ಆರ್ಜಿಸಿದನು. ಕುಸುಮಶ್ರೇಷ್ಠಿಯ ಪಾಲನೆಯಲ್ಲಿ ಪ್ರಜೆಗಳು ವರ್ಣಾಶ್ರಮಧರ್ಮಗಳನ್ನು ಪಾಲಿಸುತ್ತಾ ನಿತ್ಯವೂ ಪಂಚಮಹಾಯಜ್ಞಗಳನ್ನು ನಡೆಸುತ್ತಾ ಸದಾಚಾರ ಪರಾಯಣರಾಗಿ ಜೀವಿಸುತ್ತಿದ್ದರು. 'ಓ ಮಣಿಗುಪ್ತಾದಿಗಳೆ! ವೇದಗಳ ಕಾಲದಲ್ಲಿ **ಧರ್ಮಾರ್ಯ, ರಾಜಾರ್ಯ, ಪ್ರಜಾರ್ಯ** ಎಂಬ ಮೂರು ಸಮಿತಿಗಳು ಗಣತಂತ್ರವಿಧಾನದಲ್ಲಿ ಆರ್ಯಾವರ್ತವನ್ನು ಪರಿಪಾಲಿಸುತ್ತಿದ್ದವು. ಆ ಸಭೆಗಳಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ವೈಶ್ಯರಿರುತ್ತಿದ್ದರು. ಅಂದಿನಿಂದಲೂ ವೈಶ್ಯರಿಗೆ ರಾಜ್ಯಪಾಲನೆಯ ಅನುಭವವಿತ್ತೆಂದು ವೇದವಾಙ್ಮಯವು ಸ್ಪಷ್ಟವಾಗಿ ತಿಳಿಸಿದೆ' ಎಂದು ಸಾಲಂಕಾಯರು ವೈಶ್ಯರ ರಾಜ್ಯಪಾಲನಾನುಭವವನ್ನು ಅವರ ಪಾಲನಾ ವಿಧಾನ ವೈಶಿಷ್ಟ್ಯವನ್ನು ಅರುಹಿದರು.